## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ

**ಎಸ್.ಸಿ.ನಂಃ 10007 / 2023**

**ಚಾಸಾ ಃ 06**

**ಪ್ರಾಸಾ ಃ 11**

| | | |
|---|---|---|
| **ಹೆಸರು** | ಃ | ಲಕ್ಷ್ಮೀಪತಿ |
| **ಗಂಡನ ಹೆಸರು** | ಃ | ದ್ಯಾವಣ್ಣ |
| **ವಯಸ್ಸು** | ಃ | 39 ವರ್ಷ |
| **ವೃತ್ತಿ** | ಃ | ಬಿಲ್ ಕಲ್ಕೇಟರ್, ಅರಕೇರೆ ಗ್ರಾಮ ಪಂಚಾಯಿತಿ, |
| **ವಾಸ** | ಃ | ಬೈರಾಪುರ, ಯಲಹಂಕ ತಾಲ್ಲೂಕು. |

**ಈ ದಿನ ದಿನಾಂಕಃ 03-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

ಕಳೆದ 21 ವರ್ಷದಿಂದ ನಾನು ಅರಕೇರೆ ಗ್ರಾಮ ಪಂಚಾಯಿತಿ ಬಿಲ್ ಕಲ್ಕೇಟರ್ ರಾಗಿ ಕೆಲಸ ಮಾಡುತ್ತಿದ್ದೇನೆ.

2. ಈ ಕೇಸಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಮಾರು 5 ವರ್ಷಗಳ ಹಿಂದೆ ರಾಜಾನುಕುಂಟೆ ಪೊಲೀಸರು ಎಲ್ಲರನ್ನೂ ಠಾಣೆಗೆ ಕರೆಸಿದ್ದರು ಆಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಯಾವ ವಿಚಾರಕ್ಕೆಂದು ನನಗೆ ಗೊತ್ತಿರುವುದಿಲ್ಲ. ಅಲ್ಲದೆ ಅದರಲ್ಲಿರುವ ವಿಚಾರವನ್ನು ತಿಳಿಸಿರುವುದಿಲ್ಲ. ನಾನು ಸಹಿ ಮಾಡಿದ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಅದರಲ್ಲಿ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

3. ಅದೇ ರೀತಿ ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಇರುತ್ತದೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 4 (ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಹ ನಾನು ಅದೇ ದಿನ ಅದೇ ಸಮಯದಲ್ಲಿ ಮಾಡಿರುತ್ತೇನೆ. ಅದರಲ್ಲಿ ಬರೆದ ವಿಚಾರ ಗೊತ್ತಿರುವುದಿಲ್ಲ. ಆರೋಪಿತರನ್ನು

ನೋಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

4. ದಿನಾಂಕಃ 26-05-2020 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಪಾರ್ವತಿಪುರದ ಮನೋಜ್ ಎಂಬುವವನ ಆತನ ಸಂಗಡಿಗರೊಂದಿಗೆ ನಮ್ಮ ಪಕ್ಕದ ಮನೆಯ ಶಿವಣ್ಣನವರ ಮಗಳು ಪಲ್ಲವಿಯವರನ್ನು ಕಾರು ನೊಂದಣಿ ಸಂಖೆ ಕೆಎ 20-ಜೆಡ್-2838 ರಲ್ಲಿ ಬಂದು ಬಲವಂತಾಗಿ ಅಪಹರಣ ಮಾಡಿಕೊಂಡು ಹೋಗುತ್ತಿದ್ದಾಗ ಅವರನ್ನು ತಡೆಯಲು ನಾನು ಕಾರಿಗೆ ಅಡ್ಡ ಹೋದಾಗ ಸದರಿಯವರು ಕಾರನ್ನು ನನ್ನ ಮೇಲೆ ಹತ್ತಿಸಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ರಾಮಾಂಜಿನಪ್ಪ ಮತ್ತು ರಾಮಣ್ಣ ರವರು ತಡೆಯಲು ಬಂದಾಗ ಅವರ ಮೇಲು ಸಹ ಕಾರು ಹತ್ತಿಸಿ ಕೊಲೆ ಮಾಡಲು ಪ್ರಯತ್ನಿಸಿದಾಗ ಅವರು ಸಹ ತಪ್ಪಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಆರೋಪಿತರ ಮೇಲೆ ನಿಪಿ 5 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

5. ಸದರಿ ದೂರಿನ ಮೇರೆಗೆ ಪೊಲೀಸ್ ರು ದಿನಾಂಕ 28.05.2020 ರಂದು ಬೆಳಗ್ಗೆ 9-00 ಗಂಟೆಯಿಂದ 9-45 ಗಂಟೆ ಸಮಯದಲ್ಲಿ ನಾನು ತೋರಿಸಿದಂತೆ ಚಾಸಾ-7 ಅವಿನಾಶ ಮತ್ತು ಚಾಸಾ-8 ಸದಾನಂದ ಅವರ ಸಮಕ್ಷಮದಲ್ಲಿ ನಿಪಿ 4 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿ ಅದರಲ್ಲಿರುವ ವಿಚಾರವನ್ನು ನನಗೆ ಓದಿ ಹೇಳಿದ್ದು ಅದನ್ನು ನಾನು ತಿಳಿಸಿದುಕೊಂಡು ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

6. ನಿಪಿ 4 ಮತ್ತು 5 ರಲ್ಲಿನ ಎಲ್ಲಾ ಅಂಶಗಳು ನನಗೆ ಗೊತ್ತಿದ್ದರು ಸಹ ಮತ್ತು ಅದರಲ್ಲಿ

ಹೇಳಿದಂತೆ ಘಟನೆ ನಡೆದಿದ್ದರು ಸಹ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಯಾ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು - ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ